# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಸ.ಕಂ.ಅ.(ದೊ)ಪಿಆರ್/ 10/2018-2019

ಸಹ ಕಂದಾಯ ಅಧಿಕಾರಿ'ರವರ ಕಛೇರಿ,
(ದೊಮ್ಮಲೂರು) ಉಪವಿಭಾಗ, 12ನೇ ಮಹಡಿ,
ಪಿ.ಯು.ಬಿ ಕಟ್ಟಡ, ಎಂ.ಜಿ.ರಸ್ತೆ,
ಬೆಂಗಳೂರು-01. ದಿನಾಂಕ: -02-02-2019

**ದಿನಾಂಕ: 02-02-2019 ರಂದು ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-**

**ಸಭೆಗೆ ಹಾಜರಿದ್ದವರು:**

1. ಬಿಬಿಎಂಪಿ, ವಾರ್ಡ್ ಸಂಖ್ಯೆ 89 ರ ಅಧ್ಯಕ್ಷರಾದ ಶ್ರೀ. ಎಂ. ಗೌತಮ್ ಕುಮಾರ್,
2. ಡಾ|| ಬಸವರಾಜು ಮಗಿ, ಸಹ ಕಂದಾಯ ಅಧಿಕಾರಿ (ದೊಮ್ಮಲೂರು).
3. ವಾರ್ಡ್ ಸಮಿತಿಯ ಸದಸ್ಯರು ಸಭೆಗೆ ಹಾಜರಿದ್ದರು.
4. ಸಹಾಯಕ ಅಭಿಯಂತರರು ( ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ನಿಗಮ ಮಂಡಳಿ)
5. AE-(BESCOM)
6. ಸಹಾಯಕ ಅಭಿಯಂತರರು (ಕಾಮಗಾರಿ) ಇಲಾಖೆ
7. ಹಿರಿಯ ಆರೋಗ್ಯ ಪರಿವೀಕ್ಷಕರು
8. ತೋಟಗಾರಿಕೆ ಅಧೀಕ್ಷಕರು,
9. ಸಹಾಯಕ ಕಾರ್ಯಪಾಲಕ ಅಭಿಯಂತರರು (SWM)
10. ಕಂದಾಯ ಮೌಲ್ಯಮಾಪಕರು/ಕಂದಾಯ ವಸೂಲಿಗಾರರು/ಪಾಲಿಕೆಯ ನೌಕರರು. ರವರು ಹಾಜರಿದ್ದರು.

ವಾರ್ಡ್ ಸಮಿತಿಯ ಸಭೆಯನ್ನು ಪ್ರಾರಂಭಗೊಳ್ಳುತ್ತಿದ್ದಂತೆ ವಾರ್ಡ್ ಸಮಿತಿ ಕಾರ್ಯದರ್ಶಿಯವರಾದ ಡಾ|| ಬಸವರಾಜು ಮಗಿ ರವರು ಮಾನ್ಯ ಪಾಲಿಕೆ ಸದಸ್ಯರು ಹಾಗೂ ವಾರ್ಡ್ ಸಮಿತಿಯ ಅಧ್ಯಕ್ಷರಾದ ಶ್ರೀ.ಎಂ.ಗೌತಮ್‌ಕುಮಾರ್ ರವರನ್ನು ಹಾಗೂ ವಾರ್ಡ್ ಸಮಿತಿಯ ಸದಸ್ಯರುಗಳನ್ನು ಮತ್ತು ಅಧಿಕಾರಿಗಳನ್ನು ಸ್ವಾಗತಿಸಿದರು.

ದಿನಾಂಕ: 02-02-2019 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ 89 ರ ವಾರ್ಡ್ ಸಮಿತಿಯ ಸಭೆಯಲ್ಲಿ ಚರ್ಚಿಸಲಾದ ಪ್ರಮುಖ ವಿಷಯಗಳು:

1. ಮಾನ್ಯ ಉಚ್ಚ ನ್ಯಾಯಾಯಲದ ಆದೇಶ ಹಾಗೂ ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಆದೇಶದಂತೆ ವಾರ್ಡ್ ಮಟ್ಟದಲ್ಲಿ ವಾಡ್ ಸದಸ್ಯರ ಸಭೆಯನ್ನು **ಪ್ರತಿ ತಿಂಗಳ ಮೊದಲ ಶನಿವಾರದಂದು** ಸಭೆಯನ್ನು ಏರ್ಪಡಿಸಲು ಸಂಬಂದ ವಾರ್ಡ್ ಸಂಖ್ಯೆ : 89 ಜೋಗುಪಾಳ್ಯದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬಾಲಕರ ಪ್ರೌಢ ಶಾಲೆಯಲ್ಲಿ ಬೆಳಿಗೆ 11-30 ಕ್ಕೆ ಸರ್ವಾನುಮತದಿಂದ ಒಪ್ಪಲಾಯಿತು.

2. ವಾರ್ಡ್ ಸಮಿತಿ ಕಾರ್ಯದರ್ಶಿರವರು ವಾರ್ಡ್ ಸಮಿತಿಯ ಅಧ್ಯಕ್ಷರ ಪೂರ್ವಾನುಮತಿ ಪಡೆದು ಸದರಿ ಸಭೆಯನ್ನು ದಿನಾಂಕ: 02-02-2019 ರಂದು ಬೆಳ್ಗೆ 11-00 ಗಂಟೆಗೆ ನಿಗಧಿಪಡಿಸಲಾಯಿತು.

3. ದಿನಾಂಕ : 02-02-2019 ರಂದು ಬೆಳ್ಗೆ 11-00 ಗೆ ಸಭೆಗೆ ಹಾಜರಾಗ ಬೇಕಾಗಿದ್ದ ಎಲ್ಲಾ ಅಧಿಕಾರಿಗಳು ನಿಗಧಿತ ಸಮಯಕ್ಕೆ ಸಭೆಗೆ ಹಾಜರಾಗಿರುತ್ತಾರೆ.

4. ಪ್ರತಿ ತಿಂಗಳು ಮೇಲೆ ತಿಳಿಸಿದ ವಾರ್ಡ್ ಸಮಿತಿ ಸಭೆಗೆ ಕಾಮಗಾರಿ ಇಲಾಖೆಯಿಂದ ಆರೋಗ್ಯ ಇಲಾಖೆ /ತೋಟಗಾರಿಕೆ ಇಲಾಖೆ ಯಿಂದ ಮುಖ್ಯಸ್ಥರು ಅಥವಾ ಕಛೇರಿಯಿಂದ ಪ್ರತಿನಿಧಿಗಳು ಭಾಗವಹಿಸಲು ಮಾನ್ಯ ಅಧ್ಯಕ್ಷರು ಸೂಚಿಸಿರುತ್ತಾರೆ.

5. ವಾರ್ಡ್ ಸಮಿತಿ ಸಭೆಗೆ ಸಾರ್ವಜನಿಕರು ಪಾಲ್ಗೊಳ್ಳಲು ಹಾಜರಾಗಲು ಪ್ರಚಾರ ಮಾಡಲು ಸೂಚಿಸಲಾಯಿತು.

## ಅಜೆಂಡಾ

- ವಾರ್ಡ್ ಸಂಖ್ಯೆ- 89 ಜೋಗುಪಾಳ್ಯ ವ್ಯಾಪ್ತಿಯ ಕಾರ್ಪೋರೇಷನ್ ಸಮುದಾಯ ಭವನ ಹೊಸ ಕಟ್ಟಡ ನಿರ್ಮಾಣಕ್ಕೆ ಈಗಾಗಲೇ ಪಾಲಿಕೆ ವತಿಯಿಂದ ಕಾರ್ಯ ಆದೇಶ ನೀಡಿದ್ದು ತಹಲ್‌ವರೆವಿಗೂ ಕಾಮಗಾರಿ ಆರಂಭ ಗೊಂಡಿರುವುದಿಲ್ಲ ವೆಂದು ಮಾನ್ಯ ಅಧ್ಯಕ್ಷರು ಸದರಿ ವಿಚಾರದ ಬಗ್ಗೆ ಅಸಮಾಧಾನ ತೋರಿಸಿದ್ದು ಕೂಡಲೇ ಕಾಮಗಾರಿ ಆರಂಭ ಆಗಬೇಕು ಅಥವಾ ಗುತ್ತಿಗೆ ದಾರರನ್ನು ಕಪ್ಪುಪಟ್ಟಿಗೆ ಸೇರಿಸಲು ಸೂಚಿಸಿರುತ್ತಾರೆ.
- <u>ಕಲ್ಯಾಣ ಕಾರ್ಯಕ್ರಮ</u>
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಕಲ್ಯಾಣ ಕಾರ್ಯಕ್ರಮದ ಅಡಿಯಲ್ಲಿ (ಉದಾ:- ಲ್ಯಾಪ್ ಟಾಪ್ ವಿತಾರಣೆ. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಶುಲ್ಕಮರು ಪಾವತಿ. ಹೊಲಿಗೆ ಯಂತ್ರ ಇತ್ಯಾದಿಗಳು) ಈ ಸಭೆಯಲ್ಲಿ ವಾರ್ಡ್ ಸಂಖ್ಯೆ 89 ಜೋಗುಪಾಳ್ಯ ವ್ಯಾಪ್ತಿಯ ಸಾರ್ವಜನಿಕ / ವಿದ್ಯಾರ್ಥಿಗಳಿಂದ ಮೇಲೆ ತಿಳಿಸಿರುವ ಕಾರ್ಯಕ್ರಮಗಳಿಗೆ ಅರ್ಜಿಗಳನ್ನು ಸ್ವೀಕರಿಸಿದ್ದು ಅಧ್ಯಕ್ಷರು ಹಾಗೂ ಸಮಿತಿ ಸದಸ್ಯರು ಅಂಗೀಕರಿಸಿದ್ದು, ಅಂಗೀಕರಿಸಿದ್ದ ಫಲಾನುಭವಿಗಳ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿ ಕಲ್ಯಾಣ ಇಲಾಖೆ (ಪೂರ್ವ) ರವರಿಗೆ ನಿಯಾಮನುಸಾರ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.
- ವಾರ್ಡ್‌ನಲ್ಲಿ ಸಂಗ್ರಹವಾಗುವ ಕಸವನ್ನು ಸರಿಯಾಗಿ ವಿಲೇವಾರಿಯಾಗಿದೇ ಇರುವುದು ಕಂಡು ಬಂದಿರುವುದರಿಂದ ಸಂಭಂಧ ಪಟ್ಟ ಅಧಿಕಾರಿಗಳಿಗೆ ಶೀಘ್ರ ಕ್ರಮವಹಿಸಲು ಸೂಚಿಸಿರುತ್ತಾರೆ.
- ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಮಿತಿ ಸದಸ್ಯರುಗಳಿಗೆ ತಮ್ಮ ತಮ್ಮ ಬೀದಿಗಳಲ್ಲಿ ಕಂಡು ಬರುವಂತಹ ಸಮಸ್ಯೆಗಳನ್ನು ಖುದ್ದಾಗಿ ಸಂಬಂಧ ಪಟ್ಟ ಅಧಿಕಾರಿಗಳಿಗೆ ತಿಳಿಸಿ ಕ್ರಮ ವಹಿಸಬೇಕೆಂದು ತಿಳಿಸಿರುತ್ತಾರೆ. ಇದರಂತೆ ಸಂಬಂದ ಪಟ್ಟ ಅಧಿಕಾರಿಗಳು ಸೂಚಿಸಿದಂತೆ ಕೆಲಸವನ್ನು ನಿಭಾಹಿಸದಿದ್ದರೆ ತಮ್ಮ ಗಮನಕ್ಕೆ ತರಬೇಕಾಗಿ ಸೂಚಿಸಿರುತ್ತಾರೆ.

೭ ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು ಹಾಗೂ ಸಮಿತಿಯ ಮಾನ್ಯ ಸದಸ್ಯರುಗಳು ನೀಡಿರುವ ಸಲಹೆಗಳನ್ನು ಪರಿಗಣಿಸಿ ವ್ಯವಸ್ಥಿತವಾಗಿ ಘನತ್ಯಾಜ್ಯ ನಿರ್ವಹಣೆಯ ಕಾರ್ಯವನ್ನು ಮಾಡಲು ಮತ್ತು ಆರೋಗ್ಯಕರ ಪರಿಸರವನ್ನು ನಿರ್ಮಾಣ ಮಾಡಲು ಅಗತ್ಯ ಕ್ರಮವಹಿಸಲು ಅಭಿಪ್ರಾಯ ವ್ಯಕ್ತಪಡಿಸಿದರು.

ವಾರ್ಡ್ ಸಮಿತಿ ಅಧ್ಯಕ್ಷರು

ಶ್ರೀ. ಎಂ. ಗೌತಮ್ ಕುಮಾರ್
ಅಧ್ಯಕ್ಷರು ಹಾಗೂ ಪಾಲಿಕೆ ಸದಸ್ಯರು
ವಾರ್ಡ್ ಸಂಖ್ಯೆ: 89 ಜೋಗುಪಾಳ್ಯ

ವಾರ್ಡ್ ಸಮಿತಿ ಕಾರ್ಯದರ್ಶಿ
ಮತ್ತು ಸಂಚಾಲಕರು

ಡಾ॥ ಬಸವರಾಜು ಮಗಿ
ಸಹ ಕಂದಾಯ ಅಧಿಕಾರಿ
[illegible] ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಡಾ॥ ಬಸವರಾಜು ಮಗಿ
ಸಹ ಕಂದಾಯ ಅಧಿಕಾರಿ
[illegible] ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-

1. ಪೂಜ್ಯ ಮಹಾಪೌರರು, ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿ ರವರಿಗೆ ಕಳುಹಿಸಿದೆ.
2. ಮಾನ್ಯ ಆಯುಕ್ತರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿ ರವರಿಗೆ ಕಳುಹಿಸಿದೆ.
3. ಮಾನ್ಯ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
4. ಜಂಟಿ ಆಯುಕ್ತರು (ಪೂರ್ವ)ರವರ ಅವಗಾಹನೆಗೆ ಸಲ್ಲಿಸಿದೆ.
5. ಉಪ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
6. ಕಾರ್ಯಪಾಲಕ ಅಭಿಯಂತರರು ಬೃಹತ್ ಕಾಲುವೆ (ಜಯನಗರ) ರವರ ಮುಂದಿನ ಕ್ರಮಕ್ಕಾಗಿ
7. ಕಂದಾಯ ಅಧಿಕಾರಿ (ಶಾಂತಿನಗರ). ರವರ ಅವಗಾಹನೆಗಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು (ಕಾಮಗಾರಿ) /ವಿದ್ಯುತ್/ ಶಾಂತಿನಗರ/ ತೋಟಗಾರಿಕೆ ರವರ ಅವಗಾಹನೆಗಾಗಿ ಸಲ್ಲಿಸಿದೆ.
9. 
10. ಆರೋಗ್ಯಾಧಿಕಾರಿ (ಪೂರ್ವ) /ಆರೋಗ್ಯಾಧಿಕಾರಿ (ಶಾಂತಿನಗರ) ರವರಿಗೆ ಕಳುಹಿಸಿದೆ.
11. ಸಹಾಯಕ ಕಂದಾಯ ಅಧಿಕಾರಿ ಕಲ್ಯಾಣ (ಪೂರ್ವ) ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
12. ವಾರ್ಡ್ ಸಮಿತಿಯ ಸದಸ್ಯರು. ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
13. ಕಛೇರಿ ಪ್ರತಿ